Regd. No. M. 1299.

ಮೈಸೂರಿನಲ್ಲಿ ಪ್ರತಿ ಮಂಗಳವಾರವೂ ಪ್ರಕಟಿಸಲ್ಪಡುವುದು.

ಸತ್ಯವಾದಿ

ಅಂಚೆಸಹಿತ ವಾರ್ಷಿಕ ಚಂದಾ ರೂ. [illegible]

ಸತ್ಯಾನ್ನಾಸ್ತಿ ಪರೋಧರ್ಮಃ । ಸತ್ಯಮೇವೋದ್ಧರಾಮ್ಯಹಂ ॥

ಸಂಪುಟ ೮] ಮಂಗಳವಾರ ೨೬ನೇ ಜನವರಿ ೧೯೨೬. [ಸಂಚಿಕೆ ೨.

Sree
Rama Press,
SUBBIAH'S ROAD,
MYSORE.

ALL KINDS OF PRINTING EXECUTED
NEATLY AND PROMPTLY.

CHARGES MODERATE.

A TRIAL ORDER WILL CONVINCE.

ನವೀನ ವರ್ಷ. ನೂತನ ಗ್ರಂಥ.

ಪ್ರತಿಯೊಬ್ಬ ಭಾರತೀಯನೂ ಓದಬೇಕಾದ

ಲೋಕಮಾನ್ಯ ತಿಲಕರ ಚರಿತ್ರೆ.

೪ ಆಣೆ ಸ್ಟಾಂಪು (ಅಂಚೆವೆಚ್ಚ ಸೇರಿ) ಕಳುಹಿಸಿ. ೧೨ ಪುಸ್ತಕಗಳಿಗಿಂತ ಕಡಮೆ ವಿ.ಪಿ. ಇಲ್ಲ. ವಿ. ಪಿ. ಮೊಬಲಗಿನ ಅರ್ಧಾಂಶ ಹಣವನ್ನು ಮುಂಗಡ ಕಳುಹಿಸಬೇಕು. ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್.

ವಿಳಾಸ—

ಕೆ. ಕೃಷ್ಣರಾವ್,
ಹಂಪೇಆರಸ್ ಬಂಗ್ಲಾ,
ಶಿವರಾಂಪೇಟೆ, ಮೈಸೂರು.

TO LET

ಒಳದೇಶದ ವೃತ್ತಾಂತ.

ನಮ್ಮ ಶ್ರೀಮನ್ಮಹಾರಾಜರವರು ಅಲೀಘರ್ ವಿಶ್ವವಿದ್ಯಾಲಯಕ್ಕೆ 10 ಸಾವಿರ ರೂಪಾಯಿಗಳನ್ನು ದಯಪಾಲಿಸಿರುತ್ತಾರೆ,

ರಾಜಧಾನಿಯಲ್ಲಿ ಮುಂದಿನ ತಿಂಗಳಲ್ಲಿ ನಡೆಯುವ "ನ್ಯಾಷನಲ್ ಬೇಬಿ ವೀಕ್" ಗಾಗಿ 100 ರೂಪಾಯಿಗಳನ್ನು ಶ್ರೀಮದ್ಯುವರಾಜರು ದಯಪಾಲಿಸಿರುತ್ತಾರೆ.

ತುಂಕೂರಿನಲ್ಲಿ ನಡೆಯುವ ಲಾಯರ್ ಸಮ್ಮೇಳನದ ಸ್ವಾಗತಮಂಡಲಿಗೆ ಅಲ್ಲಿನ ಅಡ್ವೋಕೇಟ್ ಮ|| ರಂಗಯ್ಯಂಗಾರ್ಯರು ಅಧ್ಯಕ್ಷರಾಗಿ ನಿಯಮಿಸಲ್ಪಟ್ಟಿದ್ದಾರೆ.

ಕಳೆದ 12ನೇ ತಾರೀಖಿನ ದಿವಸ ದಾವಣಗೆರೆಯಲ್ಲಿ ಸರ್ಕಾರದವರಿಂದ ಒಂದು ಸಭೆ ಸೇರಿಸಲ್ಪಟ್ಟು ನಮ್ಮ ಸೀಮೆಯಲ್ಲಿ ದೇವಿ ಜಾತ್ರೆಗಳಲ್ಲಿ ಪಶು ಬಲಿಯನ್ನು ನಿರೋಧಿಸುವಬಗ್ಗೆ ಉಪನ್ಯಾಸ ಮತ್ತು ಚರ್ಚೆ ನಡೆದು ಅಲ್ಲಿ ನಡೆಯುವ ದುರ್ಗಮ್ಮನ ಜಾತ್ರೆಯಲ್ಲಿ ಕುರಿ, ಕೋಳಿ, ಕೋಣ ಮೊದಲಾದ ಪ್ರಾಣಿಗಳ ವಧೆ ನಿಲ್ಲಿಸಲು ತರಾವಾಯಿತು.

ಬೆಂಗಳೂರು ಬಸವನಗುಡಿ "ಆದಿಕರ್ನಾಟಕ ನಿವಾಸ" ದಲ್ಲಿ ವಾಸಿಸುತ್ತಿದ್ದು ಸ್ಟಾರ್ ಸ್ಕೌಟ್ ಟ್ರೂಪಿನ ಮೆಂಬರಾದ ಕೆಂಪಯ್ಯನೆಂಬಾತನು ಕಳೆದ ಕ್ರಿಸ್‌ಮಸ್ ಕಾಲದಲ್ಲಿ ಮೈಸೂರು ಸ್ಕೌಟುಗಳೊಡನೆ ಮದ್ರಾಸಿನ ಸ್ಕೌಟ್ ಜಾಂಬೂರಿಗೆ ಹೋಗಿದ್ದು ತಮ್ಮ ಮುಖ್ಯಸ್ಥರ ಅಪ್ಪಣೆಗೆ ವಿರುದ್ಧವಾಗಿ ಸಮುದ್ರದಲ್ಲಿ ಸ್ನಾನಮಾಡಲು ಹೋಗಿ, ನೀರಿನಲ್ಲಿ ಮುಳುಗಿ ಪ್ರಾಣಬಿಟ್ಟನೆಂದೂ, 3 ದಿನಗಳ ನಂತರ ದೇಹಸಿಕ್ಕಿ ಸಂಸ್ಕಾರ ಮಾಡಲಾಯಿತೆಂದೂ ತಿಳಿಯಬಂದಿದೆ.

ವರ್ತಮಾನ ಸಂಗ್ರಹ.

ಇಂಡಿಯಾಕ್ಕೆ ಹೊರದೇಶಗಳಿಂದ 1921-22 ರಲ್ಲಿ ಸುಮಾರು 35 ಲಕ್ಷ ರೂಪಾಯಿ ಬೆಲೆಯ ಆಟದ ಸಾಮಾನುಗಳು ಆಮದಾಗಿವೆಯಂತೆ.

ಪೋಸ್ಟ್‌ಕಾರ್ಡಿನ ಕ್ರಯವನ್ನು ೬ ಕಾಸಿನಿಂದ ೩ ಕಾಸಿಗೆ ಇಳಿಸಬೇಕೆಂದು, ದೆಹಲಿ ನ್ಯಾಯವಿಧಾಯಕ ಸಭೆಯಲ್ಲಿ ಒಂದು ಸೂಚನೆ ಬಂದಿರುತ್ತದೆ.

ಕವಿ ರವೀಂದ್ರನಾಥ ಠಾಕೂರ್‌ರವರ ಅಣ್ಣಂದಿರಾದ ಮಹರ್ಷಿ ದ್ವಿಜೇಂದ್ರನಾಥ ಠಾಕೂರ್‌ರವರ ತಮ್ಮ 87ನೇ ವಯಸ್ಸಿನಲ್ಲಿ ತಾ|| 19 ರಲ್ಲಿ ಸ್ವರ್ಗಸ್ಥರಾದರು.

ನಾಗಪಟ್ಟಣ:—ಅನೇಕ ದಿನಗಳಿಂದಲೂ ಭೂಮಿಯಲ್ಲಿ ಸಿಕ್ಕಿಹೋಗಿದ್ದ 282 ವಿಗ್ರಹಗಳು ಅಲ್ಲಿ ಒಂದು ಮೈದಾನದಲ್ಲಿ ಅಗೆಯುತ್ತಿದ್ದಾಗ ದೊರೆತಿರುವುದು.

ಬ್ರಿಟಿಷ್ ಇಂಡಿಯಾದಲ್ಲಿ 750 ಮುನಿಸಿಪಾಲಿಟಿಗಳೂ, 1500 ಡಿಸ್ಟ್ರಿಕ್ಟ್ ಮತ್ತು ಸಬ್-ಡಿಸ್ಟ್ರಿಕ್ಟ್ ಬೋರ್ಡುಗಳೂ, 12000 ಗ್ರಾಮಪಂಚಾಯಿತಿಗಳೂ ಇರುವುವು.

ಹೊಗೇಸೊಪ್ಪಿನ ಬಣ್ಣದಲ್ಲಿ 30 ವಿಧವಿರುವುದೆಂದೂ ಇದನ್ನು ಪತ್ತೇಮಾಡಲು ಒಂದು ಸೂಕ್ಷ್ಮ ಯಂತ್ರವನ್ನು ಒಂದು ಭಾರೀ ಹೊಗೇಸೊಪ್ಪಿನ ಕಾರ್ಖಾನೆಯವರು ತಯಾರಿಸಿರುವರೆಂದೂ ತಿಳಿಯಬಂದಿದೆ.

ಪ್ರಪಂಚದಲ್ಲಿ ಕುಸ್ತಿ ಮಾಡುವುದರಲ್ಲಿ ಪ್ರಸಿದ್ಧನಾದ ಸಿಬಿಸ್ಕೊ ಎಂಬಾತನಿಗೂ, ಲಾಹೋರಿನ ಪ್ರಖ್ಯಾತನಾದ ಗಾಮಾ ಎಂಬ ಪೈಲ್ವಾನಸಿಗೂ ಭಾರೀ ಕುಸ್ತಿ ನಡೆಯುತ್ತದೆ.

ಅಲೀಪುರದ ಎಲೆತೋಟಗಳಿಂದ ಎಲೆಗಳನ್ನು ಕದಿಯುತ್ತಿದ್ದನೆಂಬ ಗುಮಾನಿಮೇಲೆ ಆಕೋರ್ ಗಾಸ್ಕರ್ ಎಂಬಾತನನ್ನು ಅಲ್ಲಿಯ ಅನೇಕ ಜನರು ಸೇರಿ ಹೊಡೆದು ಪೋಲೀಸಿನವರ ಕೈಗೆ ಅವನನ್ನು ಕೊಟ್ಟರು. ಲಾಕಪ್ಪಿನಲ್ಲೇ ಪ್ರಾಣಬಿಟ್ಟನು.

ಭರತಖಂಡದ ವ್ಯವಸಾಯ ಸಂಬಂಧವಾದ ತಿದ್ದುಪಾಟುಗಳೇನಾಗಬೇಕಾಗಿವೆಯೋ ಅವನ್ನು ಮಾಡಬೇಕೆಂದು ಲೆಜಿಸ್ಲೆಟಿವ್ ಕೌನ್ಸಿಲ್‌ರವರು ಮಂಜೂರ್ಮಾಡಿದ್ದ ಠರಾಸಿನ ಪ್ರಕಾರ ಸರ್ಕಾರದವರು ಆದಕ್ಕೆ ಸಮ್ಮತಿಯನ್ನಿತ್ತು ಕಮಿಷನ್ನೊಂದನ್ನು ಮಾಡಿರುವರು.

ತುರ್ಕೀರಾಜ್ಯದಲ್ಲಿ ಒಬ್ಬ ಗಂಡಸಿಗೆ ಒಬ್ಬಳು ಪತ್ನಿಗಿಂತ ಹೆಚ್ಚಾಗಿರಕೂಡದೆಂದು ಕಾನೂನಾದುದನ್ನು ಸಹಿಸದೆ, 36 ಜನ ಪತ್ನಿಗಳಿದ್ದ ಅಂಬ್ರಾಂಬೇ ಎಂಬ ಐಶ್ವರ್ಯವಂತನು ತನ್ನ ಹೆಂಡಕೊಡನೆ ವಿಷಮಿಶ್ರವಾದ ಔತಣ ಊಟಮಾಡಿ, ಮಲಗಲು, ಬೆಳಿಗ್ಗೆ ಎಲ್ಲರೂ ಗತ ಪ್ರಾಣರಾಗಿದ್ದರು.

ಹಿಂದೂ ಸತ್ರಿಕೆಗೆ ಒಬ್ಬ ಪಾತ್ಮೀದಾರರು ಹೀಗೆ ಬರೆದಿರುವರು. ತಿರುವಾಂಕೂರಿನಲ್ಲಿ ಉಮ್ಮನದುರ್ಗದಲ್ಲಿರುವ ಒಂದು ಗ್ರಾಮದಲ್ಲಿ ಒಬ್ಬ ಸ್ತ್ರೀಗೆ ಆನೆಯ ಮುಖವೂ, ಮಾನವ ಶರೀರವೂ ಇರುವ ಮಗುವು ಜನಿಸಿರುವುದು. ಆ ಮಗುವನ್ನು ನೋಡಲು ಗುಂಪು ಗುಂಪಾಗಿ ಜನರು ಬರುತ್ತಿರುವರು.

ಲಂಡನ್ ಪಟ್ಟಣದಲ್ಲಿರತಕ್ಕ ಸಾವಿರಾರು ಪೋಸ್ಟಾಫೀಸುಗಳಿಗೆ ಒಂದರಿಂದೊಂದಕ್ಕೆ ಟಪಾಲು ಸಾಗಿಸಲು ಈಗ ಕುದುರೆಗಾಡಿ, ಮೋಟಾರುಗಳನ್ನು ಉಪಯೋಗಿಸುತ್ತಿರುವರೆಂದೂ. ಇನ್ನು ಮುಂದೆ ಪಟ್ಟಣದ ಕೆಳಭಾಗದಲ್ಲಿ ಸುರಂಗಹಾಕಿ, ಅಲ್ಲಿ ವಿದ್ಯುಚ್ಛಕ್ತಿ ಸಹಾಯದ ಮೂಲಕ ರೈಲಿನಲ್ಲಿ ಸಾಗಿಸಬೇಕೆಂದು ಏರ್ಪಾಡು ಮಾಡುತ್ತಿರುವರೆಂದೂ ತಿಳಿಯಬಂದಿದೆ.

ಮಧುರ:—ಶ್ರೀಮೀನಾಕ್ಷಿ ಸುಂದರೇಶ್ವರ ದೇವಾಲಯದಲ್ಲಿ ವೀರಭದ್ರಸ್ವಾಮಿಯವರ ವಿಗ್ರಹವು ಪ್ರಾಗ್ದೇಶದ ಶಿಲ್ಪಿಚಾತುರ್ಯಕ್ಕೆ ಉದಾಹರಣೆಯಾಗಿ ಸುಮಾರು ಸಾವಿರ ವರ್ಷಗಳಿಂದ ಇದ್ದಿತು. ಪ್ರಪಂಚದ ವಿವಿಧದೇಶದ ಚಿತ್ರಕಾರರು ಇದನ್ನು ನೋಡಿ ಶಿಲ್ಪಕಲೆಯನ್ನು ಅತಿಶಯವೆಂದು ಕೊಂಡಾಡುತ್ತಿದ್ದರು. ಈ ಕೆಲವು ದಿನಗಳ ಕೆಳಗೆ ಈ ವಿಗ್ರಹವನ್ನು ಯಾರೋ ಅನಾಕಾರ ಮಾಡಿರುವರು.

ನಾಗಪೂರ್:—ಗತಿಸಿದ ದೇಶಬಂಧು ದಾಸರವರ ಮಗಳು ಇಲ್ಲಿ ವಾಸಿಸುತ್ತಿರುವರು. ಈ ತಿಂಗಳು 18ರಲ್ಲಿ ಅವರು ವಾಸಿಸುವ ಮನೆಯ ಬಾಜೂ ಮನೆಯಲ್ಲಿ ಕಳ್ಳತನ ನಡೆಯಿತು. ಪೋಲೀಸಿನವರು ಅವರ ಮನೆಯ ಜವಾನರ ಮೇಲೆ ಗುಮಾನಿ ಇಟ್ಟು ಮನೆಗೆ ಬಂದು ಜವಾನರ ಹೆಸರುಗಳನ್ನು ಕೊಡಬೇಕೆಂದು ಈಕೆಯನ್ನು ಕೇಳಿದರು. ಗಂಡಸು ಮನೆಯಲ್ಲಿರಲಿಲ್ಲ. ಇಷ್ಟು ಆ ಕಾರಣವಾಗಿ ಪೋಲೀಸ್ ಅಧಿಕಾರಿಗಳು ಜವಾನರ ಹೆಸರನ್ನು ಕೇಳಿದುದನ್ನು ಕಂಡು ಕೊಡುವದಿಲ್ಲವೆನ್ನಲು ಸ್ವೇಚ್ಛೆಯಾಗಿ ಬೈದು ತಕ್ಕ ಶಿಕ್ಷೆ ಮಾಡಿಸುವೆವೆಂದು ಹೇಳಿ ಹೊರಟುಹೋದರಂತೆ.

ಬ್ರಾಹ್ಮಣರ ಭವಿಷ್ಯ

(ಲೇಖನ ೬.)

ಮೊದಲು ಬ್ರಾಹ್ಮಣರು ಒಂದು ಬ್ರಾಹ್ಮಣ ವಿದ್ಯಾಲಯವನ್ನು ಸ್ಥಾಪಿಸಬೇಕು. ಒಂದು ಹೈಸ್ಕೂಲನ್ನೂ ಒಂದು ಕಾಲೇಜನ್ನೂ ಸ್ಥಾಪಿಸುವುದಕ್ಕೆ ಮೊದಲು ಪ್ರಯತ್ನಿಸಬೇಕು. ಈ ಸ್ಕೂಲು ಕಾಲೇಜುಗಳಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಧರ್ಮಾರ್ಥವಾಗಿ ವಿದ್ಯಾದಾನ ಮಾಡಬೇಕು. ಯಾವಯಾವ ಪಂಗಡದವರು ಶಾಲೆಗಳನ್ನು ಸ್ಥಾಪಿಸುವರೋ ಆಯಾ ಪಂಗಡಗಳವರು ತಮ್ಮ ವರ್ಗದ ವಿದ್ಯಾರ್ಥಿಗಳಿಂದ ಸಂಬಳ ವಸೂಲು ಮಾಡುವುದಿಲ್ಲ. ಇದಕ್ಕೆ ರಾಜಧಾನಿಯ ಕೆಲವು ವಿದ್ಯಾಸಿಲಯಗಳೇ ನಿದರ್ಶನಗಳಾಗಿರುವುವು. ಈ ವಿದ್ಯಾಸಿಲಯಗಳ ಮೇಲ್ಪಂಗ್ತಿಯನ್ನು ಅನುಸರಿಸಿ ಬ್ರಾಹ್ಮಣರೂ ತಮ್ಮ ಪಂಗಡದ ವಿದ್ಯಾರ್ಥಿಗಳಿಗಾಗಿ ಒಂದು ಶಾಲೆಯನ್ನು ಸ್ಥಾಪಿಸುವುದು ಅಗತ್ಯ. ಹೀಗೆ ಸ್ಕೂಲುಗಳನ್ನು ಸ್ಥಾಪಿಸುವುದರಿಂದ ಎರಡು ವಿಧದ ಪ್ರಯೋಜನಗಳಿವೆ.—ಸಾವಿರಾರು ಮಂದಿ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ದೊರೆಯುವುದೊಂದು; ಕೆಲಸವಿಲ್ಲದೆ ಇರತಕ್ಕ ಬ್ರಾಹ್ಮಣ ಯುವಕರಿಗೆ ಉಪಾಧ್ಯಾಯರ ಕೆಲಸಗಳನ್ನು ಕಲ್ಪಿಸಿಕೊಡುವುದು ಇನ್ನೊಂದು. ಹೀಗೆ ಎರಡು ತರದ ಪ್ರಯೋಜನಗಳಿರುವುವು. ಈಗ ಬ್ರಾಹ್ಮಣರಿಗೆ ಸರಕಾರಿ ನೌಕರಿ ದೊರೆಯುವುದು ದುರ್ಲಭವಾದುದರಿಂದ ಅನೇಕರು ನಿರುದ್ಯೋಗಿಗಳಾಗಿರುವರು. ಇಂತಹ ಜನರಿಗೆ ಉದ್ಯೋಗ ಕಲ್ಪಿಸಿಕೊಡುವುದರಿಂದ ಸಮಾಜಕ್ಕೇ ಒಳ್ಳೇಯದಲ್ಲವೆ? ಒಂದು ಹೈಸ್ಕೂಲು ಮತ್ತು ಒಂದು ಕಾಲೇಜು ಸ್ಥಾಪಿಸಲ್ಪಟ್ಟರೆ ಕಡಿಮೆಪಕ್ಷ ನಲವತ್ತು ಅಥವಾ ಐವತ್ತು ಜನರಿಗಾದರೂ ಉದ್ಯೋಗ ದೊರೆಯುವುದು. ಇದಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಳ್ಳುವುದು ಬಹಳ ಕಷ್ಟವಾಗಿ ತೋರುವುದಿಲ್ಲ. ಒಂದು ಹೈಸ್ಕೂಲಿಗೂ ಒಂದು ಕಾಲೇಜಿಗೂ ಬೇಕಾಗಬಹುದಾದ ಹಣವನ್ನು ಸಂಸ್ಥಾನದ ಬ್ರಾಹ್ಮಣ ಮಹಾಜನರಿಂದಲೇ ಒಟ್ಟುಗೂಡಿಸಬಹುದು. ಪ್ರತಿಯೊಬ್ಬ ಬ್ರಾಹ್ಮಣನಿಗೂ ಕೈಲಾದಮಟ್ಟಿಗೂ ಧನ ಸಹಾಯ ಮಾಡುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ. ಇನ್ನೊಂದು ವಿಷಯವೇನೆಂದರೆ—ಅನೇಕ ಮಂದಿ ಸಮಾಜಸೇವೆ ಮಾಡಲು ಸಿದ್ಧರಾಗಿರುವರು. ಇಂತಹ ಸೇವೆಯನ್ನು ಸಮಾಜವು ಕೈಗೊಳ್ಳುವುದು ಸಮಾಜಕ್ಕೆ ಶ್ರೇಯಸ್ಕರವಲ್ಲವೇ? ಈ ವಿಷಯವನ್ನು ಬ್ರಾಹ್ಮಣ ಮಹಾಜನರು ಪರ್ಯಾಲೋಚಿಸಿ ನೋಡಬೇಕು. ವಿದ್ಯಾಸಿಲಯಗಳಿಂದ ಸಮಾಜಕ್ಕೆ ತುರ್ತಾ ಪ್ರಯೋಜನವುಂಟೆಂದು ಪ್ರತ್ಯೇಕವಾಗಿ ಹೇಳಬೇಕಾದುದು ಅನವಶ್ಯಕ. ಆದರೆ ಬ್ರಾಹ್ಮಣರು ಒಂದು ಹೈಸ್ಕೂಲು ಅಥವಾ ಕಾಲೇಜು ವಿಷಯವಾಗಿ ಮಾತ್ರ ಗಮನಿಸಿದರೆ ಸಾಲದು. ಬ್ರಾಹ್ಮಣರ ಅಲ್ಪಸಂಪತ್ತನ್ನು ಅಭಿವೃದ್ಧಿಗೆ ತರುವುದಕ್ಕೆ ಬೇಕಾದ ಮಾರ್ಗವನ್ನು ಅನುಸರಿಸಬೇಕು.

ಮುಂದಿನ ತಿಂಗಳಲ್ಲಿ ಡೆಲ್ಲಿಯಲ್ಲಿ ಮದ್ಯಪಾನ ನಿರೋಧಸಭೆಯು ನಡೆಯುವುದಾಗಿ ತಿಳಿಯಬಂದಿದೆ.

ಮೊಗಲ್ ಸಾಮ್ರಾಜ್ಯದ ಅಕ್ಬರ್ ಕಾಲದಲ್ಲಿ ೧ ರೂಪಾಯಿಗೆ 135 ಸೇರು ಗೋಧಿ, 202 ಸೇರು ಜೋಳ, 80 ಸೇರು ಅಕ್ಕಿ, 64 ಸೇರು ಎಣ್ಣೆ, 15 ಸೇರು ತುಪ್ಪ ಸಿಕ್ಕುತ್ತಿದ್ದುವೆಂದು ಕರೀರವು ಪ್ರಕಟಿಸಿದೆ.

ಗೋಹತ್ಯ

ನಮ್ಮ ದೇಶದಲ್ಲಿ ಮಾಡುವ ಗೋಹತ್ಯವನ್ನು ನಿಲ್ಲಿಸುವುದಕ್ಕೆ ಮಹಮ್ಮದೀಯರು ವಿರೋಧ ಕಕ್ಷಿಗಳಾದರಲ್ಲವೆ? ನಮ್ಮ ಸಂಸ್ಥಾನದಲ್ಲಿರುವ ಮಹಮ್ಮದೀಯರ ಲೆಕ್ಕವೆಷ್ಟು? ಹಿಂದೂಗಳ ಲೆಕ್ಕವೆಷ್ಟು? ಕ್ರಿಶ್ಚಿಯನ್ನರ ಲೆಕ್ಕವೆಷ್ಟು? ಇವುಗಳೆಲ್ಲವನ್ನೂ ಪರಿಗಣಿಸಿಕೊಂಡು, ವಿರೋಧಪಕ್ಷೀಯರಾದ ಮಹಮ್ಮದೀಯರ ಸಂಖ್ಯೆಯು ಮೈನಾರಿಟಿಯಾಗುವಾಗ ಅವರ ಮಾತಿಗೆ ಹೆಚ್ಚು ಗೌರವ ಕೊಡಲು ಕಾರಣವೇನು? ಮೆಜಾರಿಟಿಯಾವುದೋ ಅರೀತಿಯಾಗಿ ತೀರ್ಮಾನ ಮಾಡುವುದನ್ನು ಶ್ರೀಮನ್ಮಹಾರಾಜರವರು ಯಾಕೆ ಪರ್ಯಾಲೋಚಿಸಕೂಡದು? ಇದು ಹಿಂದೂ ರಾಜ್ಯವೇ ಹೊರ್ತು ಮಹಮ್ಮದೀಯ ರಾಜ್ಯವಲ್ಲ, ಅವರು ಜೀವನೋಪಾಯವನ್ನು ಕೇಳಿಕೊಳ್ಳುವುದಕ್ಕೆ ಮಾತ್ರ ಅರ್ಹರೇ ಹೊರತು ಮಾಡುವ ಖಾನೂನಿಗೆ ವಿರೋಧವಾಗಿ ಪ್ರವೇಶಿಸುವ ಅಕ್ರಮಕ್ಕೆ ಗೌರವ ಕೊಡುವ ಪ್ರಯತ್ನವು ಯುಕ್ತವೆಂದು ಯಾರುತಾನೆ ಒಪ್ಪಬಹುದು? ಹಿಂದೂಗಳು ಹಂದಿಯನ್ನು ಅವರ ಮಸೀದಿಯ ಮುಂದೆ ಕೊಂದರೆ ಅವರು ಒಪ್ಪಿಕೊಳ್ಳುತ್ತಾರೋ? ಅದು ಹ್ಯಾಗೆ ಅವರಿಗೆ ವಿರೋಧವೋ, ಗೋಹತ್ಯವೂ ಹಿಂದೂಗಳಿಗೆ ವಿರೋಧವಾದುದು. ಮಹಮ್ಮದೀಯರಲ್ಲಿ ಒಕರಾ ಎಂಬ ಹಬ್ಬ ಮಾಡಿ. ಕುರಿ ಕಡಿಯುತ್ತಾರೆಯೇ ಹೊರ್ತು ಗೋಹತ್ಯ ಮಾಡಿ ಯಾವ ಹಬ್ಬ ಮಾಡುತ್ತಾರೆ? ಮಹಮ್ಮದೀಯರಲ್ಲಿ ಗೋಮಾಂಸ ಭಕ್ಷಣ ಮಾಡಬೇಕೆಂದು ಖೊರಾಸಿನಲ್ಲಿ ಇದೆಯೇ? ಹಾಗಾದರೂ ಅವರು ಅದರ ಸಂಹಾರಕ್ಕೆ ಒಂದು ದಿವಸವಿಟ್ಟುಕೊಂಡು ಖೊರಾಸಿನ ಆಧಾರದಮೇಲೆ ಸಂಹಾರಮಾಡಿ ಅದರ ಮಾಂಸವನ್ನು ಪರಿಗ್ರಹ ಮಾಡುವಹಾಗಿದ್ದರೆ ಹೇಳಬಹುದು. ಯಾವುದೂ ಇಲ್ಲದೆ ಹಿಂದೂಗಳ ಉದ್ದೇಶಕ್ಕೆ ವಿರೋಧವಾಗಿ ಹೋಗುವುದೇ ಮುಖ್ಯವೆಂದು ಪೂರ್ವಾಪರ ಆಲೋಚನೆ ಮಾಡದೆ ಮಾಡುವ ವಿರೋಧಕ್ಕೆ ನಾವು ಗಮನವೇ ಕೊಡದಿದ್ದರೆ ತಾನೇ ಅಡಗಿ ಹೋಗುತ್ತದೆ. ಮೆಜಾರಿಟಿಯವರ ಅಭಿಪ್ರಾಯವನ್ನು ತೆಗೆದುಕೊಂಡು ಲಾ ಪಾಸ್ ಮಾಡಿಸಿಕೊಳ್ಳದೆಹೋದರೆ, ನ್ಯಾಯಸಂರಕ್ಷಣೆಯು ಹ್ಯಾಗೆತಾನೇ ಸಂಭವಿಸೀತು? ಮಹಮ್ಮದೀಯರು ಹಿಂದೂ ರಾಜ್ಯದಲ್ಲಿ ಇದ್ದುಕೊಂಡು ಅವರಿಗೆ ಖೇದಜನಕವಾದ ಗೋಹತ್ಯವನ್ನು ಮಾಡುತ್ತಲಿರುವುದು, ಅದನ್ನು ನಿರೋಧಿಸಲು ಮಾಡುವ ಖಾನೂನಿಗೆ ವಿರೋಧಮಾಡುತ್ತಿರುವುದು ರಾಜಭಕ್ತಿಗೆ ಸೇರುವ ಕಾರ್ಯವಾಗುವದಿಲ್ಲ. ರಾಜಭಕ್ತಿಯಿಲ್ಲದೆ, ಯುಕ್ತಾಯುಕ್ತ ಪೂರ್ವಾಪರ ಯೋಚನೆಯಿಲ್ಲದೆ ಮಾಡುವ ಅನರ ವಿರೋಧವನ್ನು ಪ್ರಜಾಸಂಖ್ಯೆಯಲ್ಲಿ ಅವರು ಎಷ್ಟುಭಾಗಕ್ಕೆ ಸೇರುತ್ತಾರೆಂಬುದನ್ನು ಪರಿಗಣಿಸಿ.

ಮೈನಾರಿಟಿಗೆ ಸೇರಿದರೆ ಅವರ ಮಾತುಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಖಾನೂನನ್ನು ಮಾಡಿ ಜಾರಿಯಲ್ಲಿ ತರುವುದೇ ಶ್ರೀಮನ್ಮಹಾರಾಜರವರಿಗೆ ಶ್ರೇಯಸ್ಕರವಾಗುವುದೆಂದು ಶ್ರೀಮನ್ಮಹಾರಾಜರವರು ಪರಿಗಣಿಸಬೇಕೆಂಬುವುದೇನೋ ಮಾತೆಯ ಪ್ರಾರ್ಥನೆ.

ಮಹಮ್ಮದೀಯರಲ್ಲಿ ಇರುವ ಎರಡು ಭೇದದಲ್ಲಿ ಇಬ್ಬರೂ ಐಕ್ಯವಾಗಿರಬೇಕೆಂದು ಮಾಡುವ ಖಾನೂನಿಗೆ ಮಹಮ್ಮದೀಯರು ಒಪ್ಪುವದಾಗ್ದಿರೆ ನಾವು ಗೋಹತ್ಯದ ಖಾನೂನನ್ನು ವಜಾ ಮಾಡೋಣ, ಆ ಪ್ರಯತ್ನವನ್ನೇ ಬಿಡೋಣ. ಗೋವಿನ ಹಾಲನ್ನು ಕುಡಿದು ಜೀವಿಸಿ, ಅದರ ಚರ್ಮೈಯನ್ನು ತಿನ್ನುತ್ತಾ, ಮೊಸರು ಕುಡಿಯುತ್ತಾ, ಅದನ್ನು ಕೊಲ್ಲುವ ಈ ಜನರು ಕೃತಜ್ಞರೆಂದು ಭಾವಿಸುವುದು ಹ್ಯಾಗೆ? ಅದನ್ನು ಕೊಂದು ಆ ಮಾಂಸವನ್ನು ಮಾರಿ ಜೀವನೋಪಾಯ ಮಾಡುವ ಕಟುಕರ ಸಂಖ್ಯೆಯು ಅಲ್ಪವಾಗಿರುವದರಿಂದ ನೇಟಿವ್ ರಾಜ್ಯದಲ್ಲಿ ಮಹಮ್ಮದೀಯರ ಅಲ್ಪಸಂಖ್ಯೆಯವರ ಅಭಿಪ್ರಾಯಕ್ಕೆ ಗೌರವ ಕೊಟ್ಟುಕೊಂಡು ಘನವಾದ ಅಭಿಪ್ರಾಯವನ್ನು ಜಾರಿಯಲ್ಲಿ ತಂದು ಹಿಂದೂ ಜನಸಮುದಾಯಕ್ಕೆಲ್ಲಾ ಕ್ಷೇಮವನ್ನು ಚಿಂತಿಸದೆ, ಉದಾಸೀನಗೊಳ್ಳುವುದಾದರೆ ಮಹಮ್ಮದೀಯರು ಹಿಂದೂಗಳನ್ನು ನಿರ್ಬಂಧವಾಗಿ ಕಡಿಸಿ ಮಹಮ್ಮದೀಯ ಮತಕ್ಕೆ ಸೇರಿಸಿಕೊಳ್ಳುವ ಪ್ರಯತ್ನವನ್ನು ಮಾಡಿಯಾರೆಂಬುವುದಕ್ಕೆ ಸಂದೇಹವಿಲ್ಲ. ಹಿಂದೆ ಹೈದರನ ಕಾಲದಲ್ಲಿ ಶ್ರೀರಂಗಪಟ್ಟಣದ ರಂಗನಾಥನಿಗೆ ಉತ್ಸವ ಮಾಡಿಕೊಡು ಬೇಡಿಯಲ್ಲಿ ಮಸೀದಿಯ ಮುಂದೆ ಒರಕೂಡು ಆಕ್ಷೇಪಣೆ ಮಾಡಿದಾಗ ಹೈದರನು ಕರೀಫ಼ಬುಡದಲ್ಲಿ ಅಲ್ಲಾಪಟ್ಟಣಯೆಂಬುದಾಗಿ ಕಟ್ಟಿಸಿ, ಧಿಗಳಾದ ಮಹಮ್ಮದೀಯರನ್ನೆಲ್ಲಾ ಅಲ್ಲಿ ವಾಸಡುತ್ತಾ ಶ್ರೀರಂಗಪಟ್ಟಣವನ್ನು ಪ್ರವೇಶಿಸಕೂಡದು ಆಜ್ಞೆಯನ್ನು ಮಾಡಿದ್ದು ಚರಿತ್ರಾರ್ಹವಾಗಿದೆ.

ತಮಗೆ ಸಾಧಕವಿಲ್ಲದಿದ್ದರೂ ಪರರಿಗೆ ಹಾನಿಯನ್ನು ಯೋಜಿಸುವ ಈ ಜನರ ಮಾತುಗಳಿಗೆ ಗೌರವ ಕೊಡುವದಕ್ಕೆ ಹೋಗುವದರಿಂದ ಶ್ರೀಮನ್ಮಹಾರಾಜರವರ ಗೌರವಕ್ಕೆ ಕುಂದುಕ ತರುವ ಆಲೋಚನೆಗೂ ಇವರು ಪ್ರವರ್ತಿಸುವರಾಗುತ್ತಾರೆಂದು ಚೆನ್ನಾಗಿ ಭಾವಿಸಬಹುದು. ಇವರ ಮಾತುಗಳಿಗೆ ಗೌರವ ಕೊಡುವ ಪ್ರಯತ್ನವೇ ಅರ್ಹವಾದದ್ದಲ್ಲವು.

ಮಿ॥ ಹಾರ್ನಿಮ್ಯಾರವರು.

"ಬೊಂಬಾಯಿ ಕ್ರಾನಿಕಲ್" ಪತ್ರಿಕೆಯ ಸಂಪಾದಕರಾಗಿಯೂ ಆಂಗ್ಲದೇಶೀಯರೂ ಭರತಖಂಡವನ್ನು ಜನ್ಮಭೂಮಿಯಂತೆ ಎಣಿಸುತ್ತ ಭರತವರ್ಷಕ್ಕೆ ಅಗಣಿತವಾದ ಸೇವೆಮಾಡಿ ಭಾರತೀಯ ರೆಲ್ಲರ ಕೃತಜ್ಞತೆಗೆ ಪಾತ್ರರಾಗಿರುವ ಮಿ॥ ಹಾರ್ನಿಮ್ಯಾರವರು ಏಳುವರ್ಷಗಳ ಪ್ರವಾಸಾನಂತರ ಕಳೆದ 10 ನೇ ತಾರೀಖಿನ ದಿನ ಮದರಾಸಿಗೆ ಬಂದರು. ಪತ್ರಿಕೆಯಲ್ಲಿ ಕೆಲವು ಸಂಗತಿಗಳನ್ನು ಬರೆದರೆಂಬ ಆಕ್ಷೇಪದಿಂದ ಇವರನ್ನು ಸರ್ಕಾರದವರು ಹೊರಕ್ಕೆ ಅಟ್ಟಿದ್ದರು. ವಾಪಸ್ ಬರಲವಕಾಶಕೊಡದೆ ಇದ್ದರು. ಈಗ ಅವಕಾಶ ದೊರೆಯಿತು. ಮದರಾಸಿನಲ್ಲಿ ಆದಿನ ಒಹಿರಂಗ ಸಭೆಯಲ್ಲಿ ಮಾತನಾಡುವಾಗ್ಗೆ ತಮ್ಮ ಅನುಭವಗಳನ್ನೆಲ್ಲಾ ವಿವರಿಸಿ ತಿಳಿಸಿದರು.

ಮುಂದೆ ಬೊಂಬಾಯಿಗೆ ಪ್ರಯಾಣ ಬೆಳಸಿ, ಅಲ್ಲಿನ ಮಹಾಜನಗಳೂ, ಕ್ರಾನಿಕಲ್ ಪತ್ರಿಕೆಯವರೂ ಏರ್ಪಾಡು ಮಾಡಿದ್ದ ಸ್ವಾಗತವನ್ನು ಸ್ವೀಕರಿಸಿದರು. ಪುನಃ ಬೊಂಬಾಯಿ ಕ್ರಾನಿಕಲ್ ಪತ್ರಿಕೆಗೆ ಅವರೇ ಸಂಪಾದಕರಾಗಿರಬೇಕೆಂದು ಅಲ್ಲಿನವರು ಕೇಳಿಕೊಂಡಿದ್ದರನೇಲೆ ಸಂಪಾದಕತ್ವವನ್ನು ಸ್ವೀಕರಿಸಿದರು. "ಭರತಖಂಡದ ಶ್ರೇಯಸ್ಸಿಗಾಗಿಯೂ, ರಾಷ್ಟ್ರದ ಜನಾಂಗದ ಸುಖಕ್ಕಾಗಿಯೂ ಪ್ರಯತ್ನ ಮಾಡುವುದೇ ಇದರ ಕರ್ತವ್ಯವಾಗಿರುವುದೆಂದು" ತಿಳಿಸಿರುವರು. ಭರತಖಂಡದ ಕಲ್ಯಾಣವನ್ನು ಬಯಸುವ ಪಾಶ್ಚಿಮಾತ್ಯರು ಅತಿ ವಿರಳ. ಅದರಲ್ಲಿಯೂ ಮಿ॥ ಹಾರ್ನಿಮ್ಯಾರಂತೆ ತಮ್ಮ ತನುಮನಧನಗಳನ್ನೂ ಈ ದೇಶದ ಸೇವೆಗಾಗಿ ಧಾರೆಯೆರೆದಿಟ್ಟು ನಿರಂತರದಲ್ಲಿಯೂ ನಮ್ಮ ಬಡಜನರ ಹಿತಚಿಂತನೆಯನ್ನು ಕೋರುತ್ತಿರುವವರು ಮತ್ತೂ ವಿರಳ. ಈ ಮಹಾ

ಶಯರು ಮಹಾತ್ಮಾ ಗಾಂಧಿಯವರ ಚಳವಳಿಗೆ ಮಹಾ ಜನರು ಸಹಾಯ ಮಾಡುವಂತೆ ವರ್ಷಡಿಸುವುದಕ್ಕಾಗಿ ಬೊಂಬಾಯಿ ನಗರದ ಒಂದೊಂದು ಮನೆಗೂ ಭೇಟಿ ಕೊಟ್ಟು ಜನರಿಗೆ ರಾಷ್ಟ್ರೀಯ ವಿಷಯಗಳನ್ನು ತಿಳಿಸಿ, ತಮ್ಮ ಟೋಪಿಯನ್ನು ಎಲ್ಲರಮುಂದೆಯೂ ಹಿಡಿದು ಒಂದು ಕಾಸುಮೊದಲುಗೊಂಡು ನೂರಾರು ರೂಪಾಯಿಗಳವರೆಗೆ ಫಂಡನ್ನು ಎತ್ತಿದ ವಿಷಯವು ಅಲ್ಲಿನವರಿಗೆಲ್ಲಾ ಇನ್ನೂ ಮರೆತಿರಲಾರದು. ಬಟ್ಟಿನಲ್ಲಿ ಬೊಂಬಾಯಿನ ಜನರಲ್ಲಿ ಹುಟ್ಟಿರುವ ನವೀನ ಜಾಗ್ರತಿಗೆ ಇವರು ಈಗಿನಕಾಲಕ್ಕೆ ಆಧಾರಭೂತರೆಂದರೆ ಅತಿಶಯೋಕ್ತಿಯಾಗಲಾರದು. ಇನ್ನೂ ಮುಂದೆಯೂ ಇವರು ಇತೋಧ್ಯತಿಶಯವಾದ ಶಕ್ತಿಯಿಂದ ಭಾರತಮಾತೆಯ ಸೇವೆಯನ್ನು ಮಾಡಲು ಸಿದ್ಧರಾಗಲೆಂದು ನಾವು ಹೃದಯಪೂರ್ವಕವಾಗಿ ಹಾರೈಸುತ್ತೇವೆ.

"ಸತ್ಯವಾದಿ"

೨೬ನೇ ಜನವರಿ ೧೯೩೬.

ರಾಟೆಯ ಸಂದೇಶವು.

ರಸಾಯನಶಾಸ್ತ್ರವಿಶಾರದರಾದ ಆಚಾರ್ಯ ಪ್ರಫುಲ್ಲ ಚಂದ್ರರಾಯರವರು ಬೊಂಬಾಯಿನಲ್ಲಿ ರಾಟೆಯ ಸಂದೇಶವನ್ನು ಬೋಧಿಸುತ್ತಾ, ರಾಟೆಯು ಪ್ರಕೃತಿ ಶಾಸ್ತ್ರವಿರುದ್ಧವಲ್ಲವೆಂದು ಘಂಟಾಘೋಷವಾಡಿ ಹೇಳಿದರು. ಕೆಲವು ವರ್ಷಗಳ ಕೆಳಗೆ ರಾಟೆಯು ದೇಶದಲ್ಲೆಲ್ಲಾ ತಿರುಗುತ್ತಲಿದ್ದಿತು. ಅದರಿಂದಲೇ ಬುಕ್‌ಮಸ್ಲಿಕ್ಲಿಗಳಂತೆ ವಸ್ತ್ರಗಳನ್ನೂ ಪ್ರಪಂಚಕ್ಕೆ ತೋರ್ಪಡಿಸಲು ರಾಟೆಗೆ ಸಾಧ್ಯವಾಯಿತು. ಇದರ ಅಭಿವೃದ್ಧಿ ಇಲ್ಲದೆ ಗ್ರಾಮ ಪುನರ್ನಿರ್ಮಾಣದಮಾತು ಸಾಗುವುದಿಲ್ಲವೆಂಬುದನ್ನು ಅವರು ತಿಳಿಸಿದರು. ಆಧುನಿಕ ಅರ್ಥಶಾಸ್ತ್ರದಲ್ಲಿ ಮುಳಿಗಿದ್ದವರಿಗೆ ಆಚಾರ್ಯರಾಯರವರಂಥಾವರ ವಾಕ್ಯಗಳಿಗಿಂತಲೂ ಪ್ರಮಾಣವಾದುದು ಮತ್ತೊಂದಿರುವುದಿಲ್ಲ.

ಆಚಾರ್ಯರವರು ಹೀಗೆ ಹೇಳಿದರು. "ಸೈನ್ಯಸಭೆಯಿಂದ ಖರ್ಚರ ಪರಿಶ್ರಮಕ್ಕಾಗಿ ದೃಷ್ಟಿಯನ್ನು ಮಾರ್ಪಡಿಸಲು ಆಧ್ಯಾತ್ಮಿಕದಿಂದ ಭೌತಿಕಕ್ಕೆ ಮಾರ್ಪಡಿಸಿದಂತಿರುವುದು. ಜರಕ [ರಾಟೆ] ವನ್ನೂ ಕುರಿತು ಹೇಳುವಾಗ ಮಧ್ಯಪರಗಣಗಳಲ್ಲೊಂದೂರಿನಲ್ಲಿ ಊರಿನವರ ಸಹಾಯದಿಂದ ಹೇಗೆ ಒಂದು ಬೀಡೀ ತಯಾರಾಗುವ ಕಂಪೆನಿಯು ಏರ್ಪಟ್ಟು ಅಭಿವೃದ್ಧಿಯಾಯಿತೋ ತಿಳಿಸುವೆನು. ವಿಶ್ರಾಂತಿ ಸಮಯದಲ್ಲಿ ಊರಿನವರು ಇಲ್ಲಿ ಬೀಡಿ ಸುತ್ತುವುದರಿಂದ ಸುಮಾರು 50000 ಮಂದಿಗಿಂತಲೂ ಹೆಚ್ಚಾದ ಜನರಿಗೆ ಆದಾಯವಾಗುತ್ತಿತ್ತು. ಸಗಟುಮೇಲೆ ಪ್ರತಿಯೊಬ್ಬರೂ, 6 ರಿಂದ 8 ಆಣೆಗಳನ್ನೂ ಸಂಪಾದಿಸುತ್ತಿದ್ದರು. ಇದಕ್ಕೆ ಮೋಹಿನೀ ಬೀಡಿಗಳೆಂದು ಹೆಸರಿಟ್ಟು ಕಲ್ಕತ್ತಾದಲ್ಲೆಲ್ಲಾ ಮಾರುತ್ತಿರುವರು. ಇದನ್ನು ಧನಿಕರು ಉಪಯೋಗಿಸದೆ ವಿದೇಶದಿಂದ ಬಂದ ಸಿಗರೇಟುಗಳನ್ನು ಉಪಯೋಗಿಸುವರು. ಇದರಿಂದ ವಿದೇಶಗಳಿಗೆ ಹೋಗುತ್ತಿರುವ ಧನಪ್ರವಾಹವನ್ನು ಯೋಚಿಸುವುದಿಲ್ಲ.

ಈ ಬೀಡಿ ವಿಷಯ ಎಷ್ಟು ಸಿದ್ಧಾಂತವೋ ಖರ್ಚರ ಸಂಗತಿಯೂಕೂಡ ಅಷ್ಟೇ. ವಿಲಾಯಿತೀ ಸರುಕುಗಳಿಗೆ ಯಾವಾಗ ಹೋಗುವರೋ ಆಗಲೇ ಅಧಃಪತನಕ್ಕೆ ತಯಾರಾಗುತ್ತಿರುವರು, ಖರ್ಚರಿನಲ್ಲಿ ಧನ ನಷ್ಟವೇ, ಲಾಭವೇ ಎಂಬ ಪ್ರಶ್ನೆಯಲ್ಲವು. ಬಡಪರಿಗೆ ತಮ್ಮ ಜೀವನವನ್ನು ನಡೆಸಲು ಸಾಕಾದಷ್ಟು ಧನವನ್ನು ಸಂಪಾದಿಸುವುದಕ್ಕೆ ಮಾರ್ಗವನ್ನು ಏರ್ಪಡಿಸುವುದೆಂತು? ಎಂಬುದೇ ಪ್ರಶ್ನೆ. ಜರಕದ ಖರೀದಿ ಕಮ್ಮಿಯೇ ವಿನಾ [illegible]ವರಿಗೆ ಅನ್ನವನ್ನು ಕೊಡುವುದು. ಪೂರ್ವದಲ್ಲಿ ಢಾಕಾವಿನಲ್ಲಿ ಮಸ್ಲಿಕ್ಲಿಗಳನ್ನು ತಯಾರುಮಾಡಿ ಪಂಗದೇಶಕ್ಕೆ ಬೇಕಾದಷ್ಟನ್ನು ಉಪಯೋಗಿಸಿದನಂತರ 20 ಕೋಟಿ ರೂಪಾಯಿನ ಬೆಲೆ ಬಾಳುವ ವಸ್ತ್ರಗಳನ್ನು ನಿದೇಶಗಳಿಗೆ ಕಳುಹಿಸುತ್ತಿದ್ದೆವು. ಆದನ್ನೆಲ್ಲಾ ಮರೆತೆವು. ಪಟ್ಟಣವಾಸಿಗಳಿಗೂ, ಹಳ್ಳಿಗಾವಿನವರಿಗೂ ರಾಟೆಯೆಂದರೆ ಏನೋ ಅರ್ಥವಾಗದು. ತಾವಿರುವ ಪ್ರದೇಶದಲ್ಲಿ ರೈತರಿಗೆ ವರ್ಷಕ್ಕೆ ನಾಲ್ಕು ತಿಂಗಳುಕಾಲ ಕೆಲಸವಿಲ್ಲ. ಸೋಮಾರಿ ಜೀವನವನ್ನು ಮಾಡುತ್ತಿರುವರು. ಆಡಂಬರವೂ, ಬಂಧವೂ ಹೆಚ್ಚಿರುವುದು. ಮಿತಜೀವಿತವನ್ನೇ ಮರೆತರು. ಈ ತಾಮಸದಿಂದ ಎಳೆಯಲು ನಮ್ಮ ಅದೃಷ್ಟವಶಾತ್ ಮಹಾತ್ಮಾ ಗಾಂಧಿಯವರ ಕೆಲಸವು ಸ್ವಲ್ಪ ಅನುಕೂಲವಾಯಿತು. ದೃಷ್ಟಿಭೇದನ ನ್ನುಂಟುಮಾಡಿತು. ಖರ್ಚರ ಪರಿಶ್ರಮಾಲಮಗಳು ಹೆಚ್ಚಿದವು. ಪ್ರತಿ 5 ಜನ ಭಾರತೀಯರಲ್ಲಿ ಒಬ್ಬನು ಆರ್ಥಾಣೆಯನ್ನು ಸಂಪಾದಿಸಿದಲ್ಲಿ ನಮ್ಮ ದೇಶದಿಂದ ಬಟ್ಟೆಗಾಗಿ ವಿದೇಶಕ್ಕೆ ಹೋಗುತ್ತಿರುವ ಮೊತ್ತದಲ್ಲಿ ಎಷ್ಟೋ ಭಾಗವು ಉಳಿಯುವುದು. ಇದು ಕಠಿಣವಾದುದಲ್ಲ. ಪ್ರತಿಮನೆಯಲ್ಲೂ ಇದ್ದು ವಿರಾಮಸಮಯದಲ್ಲಿಮಾತ್ರ ತಿರುಗುತ್ತಿದ್ದರೆ ಬಹುಶಃ ಸುಲಭಸಾಧ್ಯವಾಗುವುದು.

ರಾಟೆಯು ಮಿಲ್ಲುಗಳಮೇಲೆ ಪೋಟೀ ಸಿಲ್ಲಲಾರದೆಂದು ನಾವು ಆನೇಕಪೇಳೆ ಓದಿರುವೆವು. ಆದರೆ ರಾಟೆಯು ಪ್ರತಿಮನೆಯಲ್ಲೂ ಇದ್ದು ಕೆಲಸ ಮಾಡುತ್ತಿದ್ದರೆ ಇದರಮೇಲೆ ಯಾವುದೂಸಹ ಪೋಟಿ ಮಾಡಲಾರದು. ಹಿಂದೂದೇಶದಲ್ಲಿ ಶೇಕಡ 95 ಜನರು ಹಳ್ಳಿಗಳಲ್ಲಿ ವಾಸಿಸುವರು. ಅವರಿಗೆ ರಾಟೆಯೇ ಮುಕ್ತಿಸಾಧನವು."

ಆಚಾರ್ಯರನಂಥಾ ಮಹಾಶಾಸ್ತ್ರಜ್ಞರೂ, ಪಂಡಿತೋತ್ತಮರೂ. ಅನುಭವಶಾಲಿಗಳೂ ಇಂಥಾ ಮಾತುಗಳನ್ನಾಡಬೇಕಾದರೆ ಅವು ಹುಸಿಮಾತುಗಳಾಗುವುದಿಲ್ಲವೆಂಬುದು ಮನಸ್ಸಿನಲ್ಲಿಡಬೇಕಾದ ಸಂಗತಿಯು.

ಪೆತ್ರೆವ್ಯವಹಾರ.

[ಸೂಚನೆ:— "ಉಪಲೇಖಕರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ.]

ಸ್ವಾಮಿ:—

ಬ್ರಾಹ್ಮಣರು ಎಂಬುವರು ಯಾರು? ಬ್ರಹ್ಮಜ್ಞಾನ ಉಳ್ಳವನು ಬ್ರಾಹ್ಮಣನು. ಬ್ರಹ್ಮಜ್ಞಾನವೆಂದರೆ ಜಗತ್ಸೃಷ್ಟಿಕರ್ತನಾದವನ ವಿಚಾರನಾದ ಧ್ಯಾನದಿಂದ ಅವನಲ್ಲಿ ಭಕ್ತಿ ಇಟ್ಟುಕೊಂಡಿರುವುದೆಂದರ್ಥ. "ಮದ್ಭಕ್ತೋನಪ್ರಣಶ್ಯತಿ" ಎಂಬುದಾಗಿ ಗೀತೆಯಲ್ಲಿ ಕೃಷ್ಣ ಪರಮಾತ್ಮನು ಉದ್ಘೋಷವಾಗಿ ಹೇಳಿರುತ್ತಾನೆ. ಹೀಗಿರುವಲ್ಲಿ ಬ್ರಾಹ್ಮಣನಿಗೆ ಅಧೋಗತಿಯೆಂಬವುದು ಆವುದು? ಜಗತ್ತಿನ ಪ್ರಾಣಿಗಳಿಗೆ ಸೃಷ್ಟಿಕರ್ತನಾದ ಭಗವಂತನು ತಾನೇ ರಕ್ಷಣಕರ್ತನು ಆಗಿರುತ್ತಾನೆ. ಹಾಗಿರುವಾಗ ಬ್ರಾಹ್ಮಣರನ್ನು ಸೃಜಿಸಿದ ಭಗವಂತನು ಅವರನ್ನು ರಕ್ಷಣೆ ಮಾಡದೆ ಕೈಬಿಡುವನೆ? ಈ ಬ್ರಾಹ್ಮಣರನ್ನು ನಾಶಮಾಡಬೇಕೆಂದು ಕೃತಯುಗ, ತ್ರೇತಾಯುಗ, ದ್ವಾಪರ ಯುಗೆದಲ್ಲೆಲ್ಲಾ ಎಷ್ಟೋಮಂದಿ ಪ್ರಯತ್ನಮಾಡಿದರು, ದ್ವೇಷ ಮಾಡಿದರು, ಆದರೂ ಅವರಿಗೆ ಭಗವತ್ಸಹಾಯವು ಪರಿಪೂರ್ಣವಾಗಿರುವುದರಿಂದ ಅವರಿಗೆ ಭಯವಿಲ್ಲ. ಬ್ರಾಹ್ಮಣನು ಗರಿಕೆ ಹುಲ್ಲಿನ ಹಾಗೆ ಬೆಸಲಿಗೆ ಒಣಗುತ್ತ ಮಳೆಬಂದರೆ ಚಿಗುರುತ್ತ ಗರಿಕೆಯು ಬೇರು ಹಾಳಾಗಿ ಹೋಗದಂತೆ ಬ್ರಾಹ್ಮಣ ನಾಶಕ್ಕೆ ಬೆಸಲಿನಂತೆ ಬ್ರಾಹ್ಮಣೇತರರು ತಲೆಯೆತ್ತಿರುವರು. ಇದು ಎಷ್ಟು ದಿವಸ? ಬುದ್ಧಿಯು ಸುಂಠಾಗದಲ್ಲಿ ಬಲವು ನಿಷ್ಪ್ರಯೋಜನವು. ಈಗ ಬ್ರಾಹ್ಮಣನಿಗೆ ಬಂದಿರುವ ದರಿದ್ರತಾನೆ ಏನು? ಸರ್ಕಾರದವರು ಅಧಿಕಾರ ಕೊಡಲಿಲ್ಲವೆಂದು ಯಾಕೆ ಅಳಬೇಕು? ಬ್ರಾಹ್ಮಣನಿಗೆ ಸಾವಿರಾರು ರೂಪಾಯಿ ಖರ್ಚುಮಾಡಿ ಮುಂಜಿಮಾಡುವಾಗಲೇ ಭಿಕ್ಷಾಟನೆ ಮಾಡಿಸುತ್ತಾರೆ. ಆದ್ದರಿಂದ ಬ್ರಾಹ್ಮಣನು ಭಿಕ್ಷುಗಾರನು. ಅವನ ಭಿಕ್ಷುಕ್ಕೇನೂ ಕೊರತೆಯಿಲ್ಲ. ಎಷ್ಟೋ ಬ್ರಾಹ್ಮಣರು ರಾಜದ್ರೋಹಿಯೆಂದು ಬ್ರಾಹ್ಮಣೇತರರು ಹೇಳಬಹುದು. ಬ್ರಾಹ್ಮಣರು ರಾಜದ್ರೋಹಮಾಡಿ ಅಧಿಕಾರಮಾಡಿದರೋ, ರಾಜಭಕ್ತಿಯಿಂದ ಅಧಿಕಾರ ನಿರ್ವಾಹ ಮಾಡಿ ಸಂಸ್ಥಾನ ಉದ್ಧಾರಮಾಡಿದರೋ ಅದು ಮೈಸೂರು ಚರಿತ್ರೆಯಿಂದ ವಿಶದವಾಗುತ್ತದೆ. ಮಹಮ್ಮದೀಯರಿಂದ ರಾಜ್ಯವು ಹಿಂದೂ ಅರಸರಿಗೆ ಬರುವುದಕ್ಕೆ ಪ್ರಯತ್ನಪಟ್ಟು ಸಾಧಿಸಿದವರು ಬ್ರಾಹ್ಮಣರೋ? ಬ್ರಾಹ್ಮಣೇತರರೋ? ಅದನ್ನು ಪರ್ಯಾಲೋಚಿಸಿದರೆ ಗೊತ್ತಾಗುತ್ತದೆ. ಲೇಟ್ ಕೃಷ್ಣರಾಜ ಒಡೆಯರವರ ಬಾಲ್ಯಾವಸ್ಥೆಯಲ್ಲಿ ರೀಜಂಟು ಕೆಲಸ ಮಾಡಿ ರಾಜ್ಯವನ್ನು ತಹಬಂದಿಗೆ ತಂದವರು ಬ್ರಾಹ್ಮಣರೋ ಬ್ರಾಹ್ಮಣೇತರರೋ ಪರ್ಯಾಲೋಚನೆ ಮಾಡಿದವರಿಗೆ ಗೊತ್ತು? ರಾಜ್ಯವು ಮಹಾರಾಜ ಚಾಮರಾಜ ಒಡೆಯರವರಿಗೆ ಪ್ರಾಪ್ತವಾದ ಮೇಲೆ ದಿವಾನಗಿರಿ ಮಾಡಿದವರು ಬ್ರಾಹ್ಮಣರೋ ಬ್ರಾಹ್ಮಣೇತರರೋ ಗೊತ್ತಾಗಲಿಲ್ಲ. ರಂಗಾಚಾರ್ಲರು ಮೊದಲುಗೊಂಡು ವಿಶ್ವೇಶ್ವರಯ್ಯನವರವರೆಗೆ ದಿವಾನಗಿರಿ ಮಾಡಿದವರೆಲ್ಲ ರಾಜದ್ರೋಹ ಮಾಡಿ ದಿವಾನಗಿರಿ ಮಾಡಿದರೋ? ಅವರ ಕಾಲದಲ್ಲಿ ಸಂಸ್ಥಾನವು ಏಳಿಗೆಗೆ ಬರಲಿಲ್ಲವೋ? ಈಚಿಗೆ ದಿವಾನಗಿರಿ ಮಾಡಿದ ಬ್ರಾಹ್ಮಣೇತರರ ದವಲತ್ತಿನಲ್ಲಿ ರಾಜ್ಯದ ಅಭಿವೃದ್ಧಿಯನ್ನು ನೋಡಿದರೆ, ಹಿಂದಿನ ಬ್ರಾಹ್ಮಣರು ಮಾಡಿದ ದಿವಾನಗಿರಿಯು ನಿಷ್ಪ್ರಯೋಜನವಾದದ್ದೆಂತಲೂ, ರಾಜದ್ರೋಹಕರವಾದದ್ದೆಂತಲೂ ಯಾರುತಾನೆ ಹೇಳುವರು.

ಬ್ರಾಹ್ಮಣರು ಸರ್ಕಾರದ ಕೆಲಸಕ್ಕೆ ಲಾಯಕಿಲ್ಲ. ಬ್ರಾಹ್ಮಣೇತರರೇ ಮಾಡಲಿ, ನಾವು ಬ್ರಾಹ್ಮಣರು ಬೇರೆವಿಧವಾದ ಜೀವನವನ್ನು ಮಾಡಲಿ, ಜಮೀನ್ ವ್ಯವಸಾಯ ಮಾಡಿಸಿಕೊಂಡು ಜೀವನ ಮಾಡಲಿ, ವ್ಯಾಪಾರಮಾಡಿ ಜೀವನಮಾಡಲಿ ಸರ್ಕಾರದ ನೌಕರಿ ಇಲ್ಲದೆ ಬ್ರಾಹ್ಮಣರಿಗೆ ಜೀವಿಕೆಗೆ ಮಾರ್ಗವೇ ಇಲ್ಲವೇ? ಬ್ರಾಹ್ಮಣರು ಯಾಕೆ ಅಳಬೇಕು? ನಾವು ಬ್ರಾಮಿಣಗಳು ಚನ್ನಾಗಿರಲಿ. ಅಧಿಕಾರಗಳನ್ನು ಮಾಡಿ ಸುಖವಾಗಿರಲಿ.

ಬ್ರಾಹ್ಮಣೇತರರಾದ ರೈತರು ಕುಪ್ಪಿ ಜಮೀನಿಗೆ ಎಕರೆಗಿಕ್ಕೆ ಹೆಚ್ಚಾಗಿ ಕಂದಾಯ ಕೊಟ್ಟರೆ ೨ ರೂಪಾಯಿ ಕೊಡುತ್ತಾರಲ್ಲವೆ? ೫೦ ರೂಪಾಯಿನ ಧಾನ್ಯ ಬೆಳೆದುಕೊಳ್ಳುತ್ತಾರೆ. ಬೆಟ್ಟೇ ಹುಲ್ಲು, ಬೆಟ್ಟೇಸೌದೆ ಅನುಭವಿಸುತ್ತಾರೆ. ಹಾಲು, ಮೊಸರು ಮಾರಿಕೊಂಡು ಸುಖಜೀವನ ಮಾಡುತ್ತಾರೆ. ಅದನ್ನೆಲ್ಲಾ ಬಿಟ್ಟು ಸರ್ಕಾರದ ಕೆಲಸಕ್ಕೆ ಬಂದು, ಬ್ರಾಹ್ಮಣರಿಗೆ ಬಂದಿರುವ ದರಿದ್ರವನ್ನು ಅವರು ಹಂಚಿಕೊಳ್ಳಲಿ.

ಒಬ್ಬ ಬ್ರಾಹ್ಮಣ.

ಕಳೆದವಾರದಲ್ಲಿ ಬದೋದಾದಲ್ಲಿ ಅಲ್ಲಿನ ಮಹಾರಾಜಾ ಗಾಯಕವಾಡರ 50ನೇ ವರ್ಷದ ರಾಜ್ಯಭಾರವು ನಿರಂತರ ನಡೆದುದರ ಮಹೋತ್ಸವವನ್ನು ಬಹು ವಿಜೃಂಭಣೆಯಿಂದ ನಡೆಸಿದರು. ನಮ್ಮ ಮಹಾರಾಜರವರು ಸಪತ್ನೀಕರಾಗಿ ಆ ಕಾಲಕ್ಕೆ ಬದೋದಾದಲ್ಲೇ ಇದ್ದರು.

MYSORE GOVERNMENT
LOAN BONDS
and
SHARES OF COMPANIES
BOUGHT & SOLD

For particulars apply to—
THE SEMAH ELISHA COMPANY,
MYSORE.

A. K. NAIDU

Fine Art Engraving brass seals, wax seals, badges, door plates, stencil plates, monograms on gold and silver articles, cutch work, block for printing and all sorts of metal engraving done neatly at the lowest rates. All such works, will be done by best skilled labour and hence entire satisfaction guaranteed.

A. K. NAIDU,
Engraver and Rubber Stamp Maker,
MYSORE BANK ROAD, MYSORE.

TO POPULARISE YOUR BUSINESS IN THE KARNATAKA PROVINCES,
You must Advertise in the
SATYAVADI
It is the cheapest and most up-to-date Karnatic Weekly, read largely and circulated widely among all grades of persons offers a profitable medium for advertisements.
RECOGNISED BY GOVERNMENT
FOR
GOVERNMENT ADVERTISEMENTS
Space for Advertisements is limited.
Advertisements are
ACCEPTED WHEN SPACE IS AVAILABLE.
For rates etc. apply to
THE
SATYAVADI OFFICE, MYSORE.

ಮೈಸೂರು ಸರ್ಕಾರಿ ನಾಲದ ಪತ್ರ
ಮತ್ತು ಕಂಪೆನಿ
ಷೇರುಗಳನ್ನು ಕೊಂಡುಕೊಳ್ಳುತ್ತೇವೆ
ಮತ್ತು
ಬಿಕರಿ ಮಾಡುತ್ತೇವೆ.

ಸೇಮಾ ಇಲ್ಯೆಷಾ ಕಂಪೆನಿ, ಮೈಸೂರು,

To Let.

ಎಂ. ಎಸ್. ಸಿದ್ದಪ್ಪ ಅಂಡ್ ಬ್ರದರ್ಸ್

ಹಾರ್ಮೋನಿಯಂ
ಮತ್ತು
ಕಾಶ್ಮೀರ್ ಶಾಲುಗಳ ವ್ಯಾಪಾರಿಗಳು,
ಕೃಷ್ಣರಾಜಮೊಹಲ್ಲಾ, ಮೈಸೂರು.

ಥಳಿಗಾಲದಲ್ಲಿ ಸರ್ವರೂ ಉಪಯೋಗಿಸಲೆಂಬ ಆಭಿಪ್ರಾಯದಿಂದ ಶಾಲುಗಳ ಖರೀದಿ ಕಡಮೆಮಾಡಿದ್ದೇವೆ ಇದರಿಂದ ಸವಂಧಿಸಿರುವ ಖರೀದಿಯ ಅನೇಕ ನಮೂನೆಯ ಕಾಶ್ಮೀರ್ ಶಾಲುಗಳನ್ನು ತಯಾರಾಗುವ ಸ್ಥಳದಿಂದಲೇ ನೇರವಾಗಿ ಲಾಟುಲಂಟಾಗಿ ತಂದು ಸ್ವಲ್ಪ ಲಾಭವಿಟ್ಟು ಸುಭ ಬೆಲೆಯಿಂದ ಬಿಕರಿ ಮಾಡುತ್ತಲಿರುವರಲ್ಲದೆ ಪರಸ್ಥಳದ ಗಿರಾಕಿಗಳಿಗೆ ರವಾನಿಸುವ ಶಾಲುಗಳಿಗೆ ಮಾತ್ರ ಪ್ಯಾಕಿಂಗು ಮತ್ತು ಪೋಸ್ಟೇಜು ಸಹಾ ಬೀಳದಂತೆ ಸರಿ ಛಾರ್ಜನ್ನು ನಾವೇ ವಹಿಸಿ ರವಾನಿಸುವ ಏರ್ಪಾಡು ಮಾಡಿದ್ದೇವೆ ಒಂದಾವರ್ತಿ ತಂದು ಇದರಿಂದ ಆಗಬಹುದಾದ ಅನುಕೂಲವನ್ನು ಹೊಂದುವದರ ಮೂಲಕ ನಮ್ಮ ವ್ಯಾಪಾರಕ್ಕೆ ಪ್ರೋತ್ಸಾಹಿಸುವರೆಂದು ನಂಬಿದ್ದೇವೆ.

ಶಾಲುಗಳ ಖರೀದಿ 1 ಕ್ಕೆ 10-8-0, 11-4-0, 12-8-0, 13-4-0, 15-8-0 17-4-0, 19-8-0, 22-4-0, 24-8-0, 27-4-0, 29-12-0, 32-8-0 37-4-0, 42-12-0, 52-8-0 ಮೇಲ್ಪಟ್ಟು 150 ರೂಪಾಯಿಗಳವರೆವಿಗೂ ಸ್ಟಾಕಿನಲ್ಲಿವೆ. ನಿಮಗೆ ಯಾವ ಖರೀದಿಯಲ್ಲಿರುವ ಶಾಲುಬೇಕೋ ವಿಶದವಾಗಿ ಬರೆದಲ್ಲಿ ನಮ್ಮ ಖುದ್ ಅಜಮಾಯಿಷಿಯಿಂದ ಜಾಗ್ರತೆಯಿಸಿ ರವಾನಿಸಲಾಗುತ್ತೆ

ಸಿಗುವ ಸ್ಥಳ—ಎಂ ಎಸ್ ಸಿದ್ದಪ್ಪ ಬ್ರದರ್ಸ್.
ಹಾರ್ಮೋನಿಯಂ ಮತ್ತು ಕಾಶ್ಮೀರ
ಶಾಲುಗಳ ವ್ಯಾಪಾರಿಗಳು,
ಕೃಷ್ಣರಾಜ ಮೊಹಲ್ಲಾ, ಮೈಸೂರು.

ಇಂಡಿಯಾ ಪ್ರಾವಿಡೆಂಟ್ ಕಂಪೆನಿ,
ಲಿಮಿಟೆಡ್, ಕಲ್ಕತ್ತಾ.
ಸ್ಥಾಪನೆ 1910.

ಇಂಡಿಯಾ ಸರ್ಕಾರದ ಸೆಕ್ಯೂರಿಟಿ ಹೊಂದಿರುತ್ತೆ ಒಟ್ಟು ಫಂಡು ರೂ. ೯೦೦೦೦ ಕ್ಕಿಂತ ಹೆಚ್ಚಿಗೆ. ಕ್ಲೇಮ್ಸ್ ಕೊಟ್ಟಿರುವದು ರೂ. ೧೬೦೦೦೦ ತಿಂಗಳಿಗೆ ರೂ. ೧ ಯಿಂದ ಆಣೆ ಪ್ರಕಾರ ೧೪ ವರ್ಷ ಕಂತು ಕೊಡುವ ಪುರುಷರಿಗೂ ಸ್ತ್ರೀಯರಿಗೂ ರೂ. ೫೦೦,೨೫೦ ಗಳವರಿಗೆ ವೈದ್ಯಪರೀಕ್ಷೆ ಇಲ್ಲದೆ, ವಯಸ್ಸು ನಿರ್ಧರಿಸಲು ಜಾತಕವಿಲ್ಲದೆ ಜೀವಮಿಮೆ ಮಾಡಲಾಗುತ್ತೆ. ಹೆಚ್ಚು ವಿಷಯಕ್ಕೂ, ವಿಜಂನ್ಸಿ ಪರತ್ತಿಗೂ ಅರ್ಧ ಆಣೆ ಸ್ಟಾಂಪಿನೊಡನೆ ಕಳಗಿನ ವಿಳಾಸಕ್ಕೆ ಒರೆಯಿರಿ.

ಮೈಸೂರು ಮತ್ತು ಕೊಡಗಿನ ಚೀಫ್ ಏಜಂಟ್,
1151 ಚಾಮರಾಜಪುರಂ, ಮೈಸೂರು

ಮೈಸೂರು ರೈಲ್ವೆಗಳು.
ಪ್ರಸಿದ್ಧ ಪತ್ರಿಕೆ.

ಮೈಸೂರು ರೈಲ್ವೆ ವರ್ಕ್ ಷಾಪುಗಳಲ್ಲಿ ಮೌಲ್ಡರುಗಳೂ, ಬಾಯಿಲರ್ ಮೇಕರುಗಳೂ, ಇಲೆಜ್ ಫಿಟರ್ ಗಳೂ ಮತ್ತು ರಿವಿಟರುಗಳೂ ಕೆಲಸಕ್ಕೆ ಬೇಕಾಗಿದೆ. ಇಂಡಿಯನ್ ರೈಲ್ವೆ ವರ್ಕ್ ಷಾಪುಗಳ ಸಂಪೂರ್ಣಾನುಭವವುಳ್ಳ ಜನರು ಮಾತ್ರವೇ ಸದರಿ ಕೆಲಸಗಳಿಗಾಗಿ—

ಲೋಕೋ ಮತ್ತು ಕ್ಯಾರಿಯೇಜ್
ಸೂಪರಿಂಟೆಂಡೆಂಟ್,
ಮೈಸೂರು ರೈಲ್ವೆಗಳು,
ಮೈಸೂರು,

ಎಂಬ ವಿಳಾಸಕ್ಕೆ ಅರ್ಜಿಯನ್ನು ಬರೆದುಕೊಳ್ಳಬಹುದಾಗಿದೆ.

ಸೂಚನೆ.

ಸತ್ಯವಾದಿ ಪತ್ರಿಕೆಯು ನೂರಾರು ಮಾದರಿ ಸಂಚಿಕೆಗಳು ಪ್ರತಿವಾರವೂ ಕಳುಹಿಸಲಾಗುತ್ತಿದೆ. ಅಂತಹ ಸಂಚಿಕೆಯನ್ನು ಪಡೆಯುವ ಮಹಾಶಯರು ದಯೆಯಿಟ್ಟು ತಾವು ಚಂದಾದಾರರಾಗಿ ಪ್ರೋತ್ಸಾಹಿಸುವುದಲ್ಲದೆ, ತಮ್ಮ ಮಿತ್ರಮಂಡಲಿಯಲ್ಲಿಯೂ ಪ್ರಚಾರಪಡಿಸಬೇಕಾಗಿ ಈ ಮೂಲಕ ಕೋರಲಾಗಿದೆ

ಕ್ಯಾಲೆಂಡರ್.

ನಮ್ಮಲ್ಲಿ ತಯಾರಾಗುವ ಸುಗಂಧ ದ್ರವ್ಯಗಳನ್ನು ಪರಸ್ಥಳಗಳಿಂದ ತರಿಸಿಕೊಳ್ಳುವವರಿಗೂ ವರ್ತಕರಿಗೂ ಮತ್ತು ಮೊಟ್ಟಾ ಒಂದು ವ್ಯಾಪಾರ ತೆಗೆದುಕೊಳ್ಳುವವರಿಗೂ ಬಹಳ ಅಂದವಾಗಿ ಪ್ರಿಂಟು ಮಾಡಿಸಿರುವ 1926 ನೇ ಇಸವಿಯ ಹೊಸ ಕ್ಯಾಲೆಂಡರನ್ನು ಇನಾಮಾಗಿ ಕೊಡುತ್ತೇವೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ್,
ಸುಗಂಧಕಾರಿ, ಮೈಸೂರು.

ಅರ್ಥಸಾಧಕ ಪತ್ರಿಕೆ.

ಮೈಸೂರು ಸರ್ಕಾರದ ಉದಾರಾಶ್ರಯದಲ್ಲಿ ಪ್ರಕಟವಾಗುವ ಉತ್ತಮೋತ್ತರದ ವಾರಪತ್ರಿಕೆ.

ಇದರಲ್ಲಿ ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಗೆ ಸಹಾಯಕರವಾದ ವಿದ್ಯೆ, ವಾಣಿಜ್ಯ, ವ್ಯವಸಾಯ, ಕೈಗಾರಿಕೆ, ಪಂಸ್ಪರಸಹಾಯ, ಸಾಂಸಾರಿಕ ಮುಂತಾದ ಅರ್ಥಸಾಧಕ ವಿಚಾರಗಳಿಗೆ ತುಂಬಾ ಗಮನ ಕೊಡಲ್ಪಡುವುದು ವಿದ್ಯಾವಂಸರೂ ಪೂರ್ಣ ಪರಿಶ್ರಮವುಳ್ಳ ದೊಡ್ಡಮನುಷ್ಯರಿಂದ ಲೇಖನಗಳು ಬರೆಯಲ್ಪಡುವವು ಆಯಾ ವಾರದಲ್ಲಿ ಆಗುವ ಸರ್ಕಾರಿ ಆರ್ಡರುಗಳೂ, ವರ್ಗಾವರ್ಗಿಗಳೂ, ಪ್ರಕಟನೆಗಳೂ ಪ್ರಚುರವಾಗುವವು ಬೆಂಗಳೂರು ನಗರದ ಧಾರಣೆವಾಸಿಗಳೂ ಸಂಸ್ಥಾನದ ಆರೋಗ್ಯಸ್ಥಿತಿಯನ್ನು ಕುರಿತ ಲೆಕ್ಕಗಳೂ ಪ್ರಕಟಿಸಲ್ಪಡುತ್ತೆ ಅಧಿಕಾರಿಗಳೂ, ವರ್ತಕರೂ ಸರ್ವರೂ ಓದತಕ್ಕ ಪತ್ರಿಕೆ.

ವಾರ್ಷಿಕ ಚಂದಾ ವಿವರ.

ಪೋಷಕರಿಗೆ — ರೂ ೩-೦-೦
ಇತರರಿಗೆ ಪರಸ್ಥಳಕ್ಕೆ ಪೋಸ್ಟೇಜು ಸೇರಿ ,, ೨-೮-೦
,, ಸ್ಥಳೀಕರಿಗೆ ,, ,, ೧-೮-೦

ವಿಳಾಸ—ಎಡಿಟರ್ ಅರ್ಥಸಾಧಕ ಪತ್ರಿಕೆ,
ಅರಳೇಪೇಟೆ, ಬೆಂಗಳೂರು ಸಿಟಿ.

ಹೊಸ ಮಾದರಿಯ ಊದಬತ್ತಿಗಳು

ಉತ್ತಮವಾದ ಮೂಲಿಕೆಗಳಿಂದಲೂ ಅತ್ತರು ಮೊದಲಾದ ಸಾರಗಳಿಂದಲೂ ಒಡಗೂಡಿ ದೇವತಾ ಪೂಜೆಗೆ ಯೋಗ್ಯವಾದ 'ದಶಾಂಗಬತ್ತಿ' ಎಂಬದಾಗಿ ಪ್ರಸಿದ್ಧಿಹೊಂದಿರುವ ಹೊಸರೀತಿಯ ಊದಬತ್ತಿಗಳು ನಮ್ಮಲ್ಲಿ ತಯಾರಾಗಿ ಬಿಕರಿಗೆ ಸಿದ್ಧವಾಗಿವೆ ಕ್ರಯ ಸೇರು ೧ಕ್ಕೆ (ಸುಮಾರು ೬೦೦ ಬತ್ತಿಗಳು) ೩ ರೂ ಸಾಯಿ ಮಾತ್ರ. ಸರ್ವರೂ ತರಿಸಿ ತನ್ಮೂಲಕ ನಮ್ಮ ಶ್ರಮವನ್ನು ಸಾರ್ಥಕಗೊಳಿಸಬೇಕಾಗಿ ಪ್ರಾರ್ಥನೆ ನಮ್ಮಲ್ಲಿ ಇನ್ನೂ ಇತರ ವಿಧವಾದ ಹೆಚ್ಚಿನ ಬೆಲೆಯ ಅಂಬರ್ ಕಸ್ತೂರಿ ಬತ್ತಿಗಳೂ, ಗಂಧದ ಬಿಲ್ಲೆ, ಅತರಗಜ, ಪನ್ನೀರು ವಗೈರೆ ಸಹಾ ದೊರೆಯುತ್ತೆ.

ಸಿ. ಪದ್ಮಯ್ಯ, ಕಮರ್ಷಿಯಲ್ ಹಾಲ್,
ಸಂತೇಪೇಟೆ, ಮೈಸೂರು.

ಮೈಸೂರು ಡಿ. ಸುಬ್ಬಯ್ಯನವರ ರಸ್ತೆಯಲ್ಲಿರುವ ಶ್ರೀರಾಮ ಪ್ರೆಸ್ಸಿನಲ್ಲಿ ಅಗರಂ ರಂಗಯ್ಯ, ಬಿ.ಎ., ಯವರಿಂದ ಸಂಪಾದಕರಿಗಾಗಿ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ